प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA

**संचार विभाग,** केंद्रीय कार्यालय, एस.बी.एस.मार्ग, मुंबई-400001

**DEPARTMENT OF COMMUNICATION**, Central Office, S.B.S.Marg, Mumbai-400001

फोन/Phone: 91 22 2266 0502 फैक्स/Fax: 91 22 2266 0358

वेबसाइट : www.rbi.org.in/hindi
Website : www.rbi.org.in
इ-मेल email: helpdoc@rbi.org.in

**ಅಕ್ಟೋಬರ್ 14, 2016**

**ಯುನೈಟೆಡ್ ಇಂಡಿಯ ಕೋ-ಒಪರೇಟಿವ್ ಬ್ಯಾಂಕ್ ಲಿಮಿಟೆಡ್ ಗೆ ನೀಡಿರುವ ಮಾರ್ಗದರ್ಶನಗಳನ್ನು ಆರ್ ಬಿ ಐ ಹಿಂತೆಗೆದುಕೊಂಡಿದೆ.**

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ದಿನಾಂಕ ಜುಲೈ 08, 2015 ರ ಸೂಚನೆಯ ಮೂಲಕ ಯುನೈಟೆಡ್ ಇಂಡಿಯ ಕೋ-ಒಪರೇಟಿವ್ ಬ್ಯಾಂಕ್ ಲಿಮಿಟೆಡ್ , ನಗಿನ , ಬಿಜ್ನೋರ್ , ಉತ್ತರ ಪ್ರದೇಶಗೆ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 35A ರ ಜೊತೆಗೆ ಕಲಂ 56 ರ ಅಡಿಯಲ್ಲಿ ಮಾರ್ಗದರ್ಶನಗಳನ್ನು ನೀಡಿತ್ತು. ಕಾಲಕಾಲಕ್ಕೆ ಈ ಮಾರ್ಗದರ್ಶನಗಳನ್ನು ವಿಸ್ತರಿಸಲಾಗಿತ್ತು ಹಾಗೂ ಕೊನೆಯ ದಿನಾಂಕ ಮಾರ್ಚ್ 30,2016 ರ ಮಾರ್ಗದರ್ಶನವು ದಿನಾಂಕ ಅಕ್ಟೋಬರ್ 14, 2016 ರ ವರೆಗೆ ಸಿಂಧುತ್ವವಾಗಿತ್ತು.

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 35A ರ ಉಪ ಕಲಂ (2) ಜೊತೆಗೆ ಕಲಂ 56 ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಯುನೈಟೆಡ್ ಇಂಡಿಯ ಕೋ-ಒಪರೇಟಿವ್ ಬ್ಯಾಂಕ್ ಲಿಮಿಟೆಡ್ , ನಗಿನ , ಬಿಜ್ನೋರ್ , ಉತ್ತರ ಪ್ರದೇಶಗೆ ನೀಡಿರುವ ಮಾರ್ಗದರ್ಶನಗಳನ್ನು (ಕಾಲಕಾಲಕ್ಕೆ ಬದಲಾಯಿಸಲಾಗಿದೆ) ದಿನಾಂಕ ಅಕ್ಟೋಬರ್ 15, 2016 ರಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಂಡಿದೆ. ಈ ನಿರ್ಣಯವನ್ನು ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ತೆಗೆದುಕೊಳ್ಳಲಾಗಿದೆ.

ನಿರ್ದೇಶನದ ಒಂದು ಪ್ರತಿಯನ್ನು ಬ್ಯಾಂಕ್ ಆವರಣದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗಿದೆ. ಬ್ಯಾಂಕ್ ತನ್ನ ದಿನನಿತ್ಯದ ಬ್ಯಾಂಕಿಂಗ್ ವ್ಯವಹಾರವನ್ನು ಮುಂದುವರೆಸಬಹುದು.

ಅನಿರುದ್ಧ ಡಿ ಜಾಧವ
ಸಹಾಯಕ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ : 2016-2017/929